# ಕೊಕ್ಕೊ ಪೋಷಕಾಂಶ ಕಾರ್ಡ್

## ಪೋಷಕಾಂಶ ನಿರ್ವಹಣೆ

ಮೊದಲ ಕಂತು : ಸೆಪ್ಟಂಬರ್–ಅಕ್ಟೋಬರ್

ಎರಡನೇ ಕಂತು : ಫೆಬ್ರವರಿ–ಮಾರ್ಚ್

ಮಣ್ಣು ಪರೀಕ್ಷಾ ಆಧಾರದ ಮೇಲೆ ಹೆಚ್ಚುವರಿ ಪೊಟ್ಯಾಶಿಯಂ, ಬೋರಾನ್ ಮತ್ತು ಸತು ಪೋಷಕಾಂಶಗಳನ್ನು ನೀಡಬೇಕು

| ಪೋಷಕಾಂಶ/ ಗೊಬ್ಬರದ ಪ್ರಮಾಣ (ಗ್ರಾಂ) | ಮೊದಲನೇ ವರ್ಷ | ಎರಡನೇ ವರ್ಷ | ಮೂರನೇ ವರ್ಷ ಮತ್ತು ನಂತರ |
|---|---|---|---|
| ಸಾರಜನಕ | 33 | 66 | 100 |
| ರಂಜಕ | 13 | 26 | 40 |
| ಪೊಟ್ಯಾಶಿಯಂ | 46 | 92 | 140 |
| ಯೂರಿಯಾ | 72 | 144 | 220 |
| ಶಿಲಾ ರಂಜಕ (ರಾಕ್ ಫಾಸ್ಪೇಟ್) | 65 | 130 | 200 |
| ಮ್ಯೂರೇಟ್ ಆಫ್ ಪೊಟ್ಯಾಶ್ (MOP) | 77 | 154 | 235 |
| ಗೊಬ್ಬರ ನೀಡಬೇಕಾದ ದೂರ (ಕಾಂಡದಿಂದ) | 1 ಅಡಿ | 2 ಅಡಿ | 3 ಅಡಿ |

## ಹನಿ ರಸಾವರಿ

ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಡಿಸೆಂಬರ್‌ನಿಂದ ಮೇ ತಿಂಗಳವರೆಗೆ 10 ದಿನಗಳ ಅಂತರದಲ್ಲಿ ನೀಡಬಹುದು.

ಯೂರಿಯಾ – 135 ಗ್ರಾಂ

ಡಿ.ಎ.ಪಿ. (DAP) – 65 ಗ್ರಾಂ

ಮ್ಯೂರೆಟ್ ಆಫ್ ಪೊಟ್ಯಾಶ್ (MOP) – 175 ಗ್ರಾಂ

## ಪೊಟ್ಯಾಶಿಯಂ ಕೊರತೆ



**ಲಕ್ಷಣಗಳು:**

- ಎಲೆ ಅಂಚಿನ ಬಳಿ ಮಸುಕಾದ ಹಳದಿ ಪ್ರದೇಶಗಳು ರೂಪುಗೊಳ್ಳುತ್ತವೆ ಮತ್ತು ತ್ವರಿತವಾಗಿ ಒಣಗಿ ಬೂದಿ ಮಿಶ್ರಿತ ಕಂದು ಬಣ್ಣಕ್ಕೆ ತಿರುಗುತ್ತವೆ.
- ಇವುಗಳು ಸ್ವಲ್ಪ ಸಮಯದ ನಂತರ ಪರಸ್ಪರ ಬೆಸೆಯುತ್ತವೆ.

**ನಿರ್ವಹಣೆ:**

- ಮುಖ್ಯ ಬೆಳೆ ಮತ್ತು ಉಪ ಬೆಳೆಗಳಿಗೆ ಮಣ್ಣು ಪರೀಕ್ಷೆ ಆಧಾರದ ಮೇಲೆ ಪೊಟ್ಯಾಶಿಯಂ ಗೊಬ್ಬರವನ್ನು ನೀಡಬೇಕು.
- ಸಾಮಾನ್ಯವಾಗಿ, ಕೊಕ್ಕೊ ಮರಕ್ಕೆ 235 ಗ್ರಾಂ ಎಂ.ಒ.ಪಿ. ಅಥವಾ 280 ಗ್ರಾಂ ಸಲ್ಫೇಟ್ ಆಫ್ ಪೊಟ್ಯಾಶ್ ನೀಡಬಹುದು.
- ಸಲ್ಫೇಟ್ ಆಫ್ ಪೊಟ್ಯಾಶ್ (5 ಗ್ರಾಂ 1 ಲೀ ನೀರಿಗೆ) ಅಥವಾ ಪೊಟ್ಯಾಶಿಯಂ ನೈಟ್ರೇಟ್(5 ಗ್ರಾಂ 1 ಲೀ ನೀರಿಗೆ)ನ್ನು ಎಲೆಗಳ ಮೇಲೆ ಸಿಂಪಡಿಸಬಹುದು.
- ಪೊಟ್ಯಾಶಿಯಂ ಪೋಷಕಾಂಶದ ಉತ್ತಮ ಮೂಲವಾದ ಕೊಕ್ಕೊ ಸಿಪ್ಪೆ / ಅಡಿಕೆ ಸಿಪ್ಪೆ / ತೆಂಗಿನ ನಾರನ್ನು ಮರು ಬಳಕೆ ಮಾಡಬಹುದು.
- ಮರದ ಬೂದಿಯನ್ನು ಸಹ ಬಳಸಬಹುದು.

## ಸತುವಿನ ಕೊರತೆ



**ಲಕ್ಷಣಗಳು:**

- ಎಲೆಗಳು ಬಿಳಿಚಿಕೊಳ್ಳುವುದು ಇದರ ಪ್ರಾರಂಭಿಕ ಲಕ್ಷಣವಾಗಿದೆ. ಈ ರೀತಿ ಬಿಳುಚಿಕೊಳ್ಳುವುದು ಅಲ್ಲಲ್ಲಿ ಕಂಡು ಬಂದು ನಂತರದ ದಿನಗಳಲ್ಲಿ ಎಲೆಯ ಪತ್ರನಾಳಗಳು ಮಾತ್ರ ಹಸಿರಾಗಿರುತ್ತವೆ.
- ಎಲೆಗಳು ಕತ್ತಿ ಆಕಾರದಲ್ಲಿದ್ದು ಸಣ್ಣ ಎಲೆ ನಂಜುರೋಗದ ಲಕ್ಷಣವನ್ನು ತೋರಿಸಿದಂತಿರುತ್ತದೆ.
- ಕೊಂಬೆಗಳು ಗುಚ್ಚ ರೋಗದ ಚಿಹ್ನೆ ತೋರಿಸಿ ಒಣಗುತ್ತವೆ.

**ನಿರ್ವಹಣೆ:**

- 0.3% ಸತುವಿನ ಸಲ್ಫೇಟ್ (1 ಲೀ ನೀರಿಗೆ 3 ಗ್ರಾಂ)ನ್ನು ಎಲೆಗಳ ಮೇಲೆ ಸಿಂಪಡಿಸುವುದರಿಂದ ಸತುವಿನ ಕೊರತೆಯನ್ನು ಹೋಗಲಾಡಿಸ–ಬಹುದು.
- ಪ್ರತಿ ಮರಕ್ಕೆ 25 ಗ್ರಾಂ ಸತುವಿನ ಸಲ್ಫೇಟ್ (ಜಿಂಕ್ ಸಲ್ಫೇಟ್) ನೀಡಬೇಕು.

# ಕೊಕ್ಕೊ ಪೋಷಕಾಂಶ ಕಾರ್ಡ್

## ಬೋರಾನ್ ಕೊರತೆ



**ಲಕ್ಷಣಗಳು :**

- ಹೊಸ ಎಲೆಗಳಲ್ಲಿ ಬೋರಾನ್ ಕೊರತೆಯ ಲಕ್ಷಣಗಳನ್ನು ಕಾಣಬಹುದು.
- ಎಲೆಗಳು ಸಣ್ಣದಾಗಿ ವಿರೂಪವಾಗಿದ್ದು, ಮಡಚಿರುತ್ತವೆ. ಅಲ್ಲದೆ, ಒಣಗಿದ/ಸುಟ್ಟ ಲಕ್ಷಣಗಳನ್ನು ಕಾಣಬಹುದು.

**ನಿರ್ವಹಣೆ:**

- ಶೇಕಡಾ 20ರಷ್ಟು ಬೋರಾನ್ ಹೊಂದಿದ ಗೊಬ್ಬರವನ್ನು 1 ಲೀ ನೀರಿಗೆ 2 ಗ್ರಾಂ ಪ್ರಮಾಣದಲ್ಲಿ ಹಾಕಿ ಕಲಕಿ ಎಲೆಗಳ ಮೇಲೆ ಸಿಂಪಡಿಸಬೇಕು.
- ಮಣ್ಣಿಗೆ ಬೋರಾಕ್ಸ್ ಗೊಬ್ಬರವನ್ನು 20 ಗ್ರಾಂನಂತೆ ಮರವೊಂದಕ್ಕೆ ಹಾಕಬೇಕು.

## ಕಬ್ಬಿಣದ ಕೊರತೆ



**ಲಕ್ಷಣಗಳು :**

- ಎಲೆಗಳ ಪತ್ರನಾಳಗಳು ಮಾತ್ರ ಕಡು ಹಸಿರಾಗಿದ್ದು ಉಳಿದ ಭಾಗಗಳು ತಿಳಿ ಹಸಿರಾಗಿರುತ್ತವೆ. ಕೆಲವೊಮ್ಮೆ ಪತ್ರನಾಳಗಳು ಹಸಿರಾಗಿದ್ದು ಉಳಿದ ಭಾಗಗಳು ತಿಳಿ ಹಳದಿ ಮಿಶ್ರಿತ ಬಿಳಿ ಅಥವಾ ಸಂಪೂರ್ಣ ಬಿಳಿ ಬಣ್ಣದ್ದಾಗಿರುತ್ತದೆ. ಬೆಳೆಯುತ್ತಿರುವ ತುದಿಯು ಒಣಗುತ್ತದೆ. ಹಳೆ ಎಲೆಯ ಅಂಚು ಮತ್ತು ತುದಿಯಲ್ಲಿ ಸುಟ್ಟ ಲಕ್ಷಣಗಳು ಕಂಡು ಬರುತ್ತವೆ.

**ನಿರ್ವಹಣೆ:**

- ಶೇಕಡಾ 1ರಷ್ಟು ಕಬ್ಬಿಣದ ಸಲ್ಫೇಟ್ (ಫೆರಸ್ ಸಲ್ಫೇಟ್) (1 ಲೀ ನೀರಿಗೆ 10 ಗ್ರಾಂ)ನ್ನು ಎಲೆಗಳ ಮೇಲೆ ಸಿಂಪಡಿಸಬೇಕು.

## ಮ್ಯಾಂಗನೀಸ್ ಕೊರತೆ



**ಲಕ್ಷಣಗಳು:**

- ಮ್ಯಾಂಗನೀಸ್ ಕೊರತೆಯ ಲಕ್ಷಣಗಳನ್ನು ಮಧ್ಯಮ ಗಾತ್ರದ ಹೊಸ ಎಲೆಗಳಲ್ಲಿ ಕಾಣಬಹುದು.
- ಪತ್ರನಾಳಗಳು ಹಸಿರಾಗಿದ್ದು ಉಳಿದ ಭಾಗಗಳು ತಿಳಿ ಹಳದಿ ಮಿಶ್ರಿತ ಬಣ್ಣದಾಗಿರುತ್ತವೆ.
- ಹಸಿರು ಬಣ್ಣದ ಪತ್ರನಾಳಗಳ ಜಾಲವನ್ನು ಕಾಣಬಹುದು.

**ನಿರ್ವಹಣೆ:**

- ಶೇಕಡಾ 0.2ರಷ್ಟು ಮ್ಯಾಂಗನೀಸ್ ಸಲ್ಫೇಟ್ (1 ಲೀ ನೀರಿಗೆ 2 ಗ್ರಾಂ)ನ್ನು ಎಲೆಗಳ ಮೇಲೆ ಸಿಂಪಡಿಸಬೇಕು.

ವಿಸ್ತರಣೆ ಮಡಿಚೋಲೆ ಸಂಖ್ಯೆ : 297

ಲೇಖಕರು: ಭವಿಷ್ಯ, ಡಾ. ಎಸ್. ಎಲೈನ್ ಅಪ್ಸರ ಮತ್ತು ಡಾ. ರವಿ ಭಟ್

ಭಾ.ಕೃ.ಅನು.ಪ. – ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕ್ಷೇತ್ರೀಯ ಕೇಂದ್ರ, ವಿಟ್ಲ, ಕರ್ನಾಟಕ– 574 243

ದೂರವಾಣಿ ಸಂಖ್ಯೆ: 08255– 239238, Email: cpcrivtl@gmail.com

ಮಾರ್ಚ್, 2021

ಪ್ರಕಾಶಕರು : ನಿರ್ದೇಶಕರು, ಭಾ.ಕೃ.ಅನು.ಪ. – ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡು, ಕೇರಳ – 671 124

ಪ್ರಾಯೋಜಕರು : ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿ, ಕೇರಳ– 682 011

भाकृअनुप ICAR

के रो फ अ सं CPCRI